**International Journal of Academic Research** P-ISSN: 2348-7666: Impact Factor: 7.215
Homepage: https://www.ijar.org.in/
Volume-13, Issue-2, April-June-2026
This work is licensed under a Creative Commons Attribution 4.0 International License [CC BY 4.0]

**Research Article**

# ಯುದ್ಧದ ಯಜ್ಞಕ್ಕೆ ಆಜ್ಯ ಮಾನವೀಯತೆ

**ಡಾ. ಮುನಿರಾಜ ಎ.**
ಸಹಾಯಕ ಪ್ರಾಧ್ಯಾಪಕರು, ಭಾಷಾ ವಿಭಾಗ–ಕನ್ನಡ, ಮದ್ರಾಸು ಕ್ರೈಸ್ತವ ಕಾಲೇಜು (ಸ್ವಾಯತ್ತ) ತಾಂಬರಂ, ಚೆನ್ನೈ

**ಪೀಠಿಕೆ:**

ಮನುಷ್ಯನ ದುರಾಸೆಯೋ, ಬುದ್ಧಿವಂತಿಕೆಯೋ, ಅಹಂಕಾರವೋ, ಪೈಪೋಟಿಗೆ ಬಿದ್ದಾಗ ಏರ್ಪಡುವ ಘರ್ಷಣೆಯು ಯುದ್ಧಕ್ಕೆ ನಾಂದಿಯಾಗುತ್ತದೆ. ಯುದ್ಧಕ್ಕೆ ರಾಗ ದ್ವೇಷಗಳಿಲ್ಲ; ಅಂತೆಯೇ ಯುದ್ಧದಲ್ಲಿ ಮುಳುಗಿದವರಿಗೂ ಸಹ. ಅಸೂಯೆಯಿಂದಲೋ, ಅನಿವಾರ್ಯದಿಂದಲೋ ಅನೇಕ ಪಾತಕಗಳನ್ನು ಎಸಗಬೇಕಾಗುತ್ತದೆ. ಆದರೆ ಕೊನೆಗೊಂದು ಸಲ ಅಂತಹ ಕಲ್ಲು ಹೃದಯವೂ ಸಹ ಹನಿ ಕಣ್ಣೀರನ್ನು ಸುರಿಸುತ್ತದೆ. ನಮಗೆ ಸೈನ್ಯವೆಂದರೆ, ಸೈನಿಕರೆಂದರೆ ಎಲ್ಲಿಲ್ಲದ ಗೌರವ. ದೇಶವನ್ನು ಕಾಯುವ ನಿಜವಾದ ದೇವರುಗಳೆಂಬುದು ನಮ್ಮ ಅಭಿಮತ. ಆದರೆ ಸೈನಿಕ ತುಕಡಿಗಳು ಎಸಗುವ ಘನಘೋರ ಕಾರ್ಯಗಳನ್ನು ನಾವು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ವಿಶ್ವವನ್ನೇ ನಡುಗಿಸಿದ ಎರಡನೆ ಮಹಾಯುದ್ಧದ ದಿನಗಳ ಭೀಕರತೆ ಎಂದಿಗೂ ಮಾಯಲಾರದ್ದು. ಇಂತಹ ಯುದ್ಧದ ಸಮಯದಲ್ಲಿ ಸೇನೆಯಲ್ಲಿ ಸೈನಿಕನಾಗಿದ್ದು, ಸ್ವತಃ ಕಂಡಂತಹ, ಅನುಭವಿಸಿದ ಸಂದರ್ಭಗಳನ್ನು ತೆಲುಗಿನ ಅಂಗರ ವೆಂಕಟಕೃಷ್ಣಾರಾವ್‌ರವರು ಕಟ್ಟಿಕೊಟ್ಟಿದ್ದಾರೆ. 'ವಿರಾಮಂ' ಎಂಬ ಈ ಅಭೂತಪೂರ್ವ ಕಾದಂಬರಿಯನ್ನು ಕನ್ನಡಕ್ಕೆ ತಂದಿದ್ದಾರೆ ದ್ರಾವಿಡ ವಿಶ್ವವಿದ್ಯಾಲಯ ಕುಪ್ಪಂನ ಪ್ರಾಧ್ಯಾಪಕರಾದ ಡಾ. ಕೆ. ಶಾರದಾರವರು. ಎರಡನೆ ಮಹಾಯುದ್ಧವನ್ನು ಕುರಿತಂತೆ ಬೇರೆ ಭಾಷೆಗಳಲ್ಲಿ ಅನೇಕ ಕೃತಿಗಳು ಬಂದಿದ್ದರೂ ದಾಕ್ಷಿಣಾತ್ಯ ಭಾಷೆಗಳಲ್ಲಿ ಇದು ತುಂಬಾ ವಿರಳ. ಇಷ್ಟು ಪ್ರಭಾವಯುತವಾದ ಕಾದಂಬರಿ ಖಂಡಿತ ಕನ್ನಡಿಗರ ಮನಸ್ಸಿನಲ್ಲಿ ನಿಲ್ಲುತ್ತದೆಂಬ ಆಶಯದಿಂದ ಅನುವಾದಕರು ಈ ಕೃತಿಯನ್ನು ಕನ್ನಡಿಸಿದ್ದಾರೆ. ಯುದ್ಧದ ಈ ಸಂದರ್ಭದಲ್ಲಿ ಕ್ರೌರ್ಯ ಮತ್ತು ಮಾನವೀಯತೆಗಳ ಮುಖಾಮುಖಿಯನ್ನು ಸಹಜವಾಗಿ ವಿವರಿಸಿರುವುದು ಮನಸ್ಸನ್ನು ತಾಕುತ್ತದೆ. ಕನ್ನಡದಲ್ಲಿ 'ವಿರಾಮ' ಎಂಬ ತಲೆಬರಹದಲ್ಲಿ ಪ್ರಕಟಗೊಂಡಿರುವ ಈ ಕಾದಂಬರಿಯು ಹೊರಸೂಸುವ ಮಾನವೀಯ ಮೌಲ್ಯಗಳ ಸೌರಭವನ್ನು ಆಘ್ರಾನಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

**ವಿಷಯ ನಿರೂಪಣೆ**

ಎರಡನೆ ಮಹಾಯುದ್ಧದ ಉಸಿರು ಬಿಗಿಹಿಡಿಸುವ ಸಂದರ್ಭದಲ್ಲಿ, ಬಡತನವನ್ನು ಬೆನ್ನಿಗೆ ಕಟ್ಟಿಕೊಂಡು ಬದುಕಲು ಹೆಣಗಿದ ಅದೆಷ್ಟೋ ಮಂದಿಯು ನಿರಾಯಾಸವಾಗಿ ಹೆಣಗಳಾಗಿರುವುದು ಇತಿಹಾಸದಿಂದ ತಿಳಿಯುತ್ತದೆ. ಯಾರದ್ದೋ ಅಹಂಕಾರ, ಜಿದ್ದಿಗೆ ಏನೂ ತಪ್ಪನ್ನು ಮಾಡದ, ಏನೂ ಅರಿಯದ ಮುಗ್ಧ ಜೀವಗಳೆಷ್ಟೋ ಬಲಿಯಾಗಿವೆ. ಇಂತಹ ಯುದ್ಧದ ಸೈನ್ಯದ ಒಂದು ತುಕಡಿಗೆ ನಿಯೋಜನೆಗೊಂಡು ಹೊರಡುವ ಲೇಖಕರು ಅನೇಕ ಅವಸ್ಥೆಗಳನ್ನು ಪಟ್ಟುಕೊಳ್ಳುತ್ತಾ, ಹೊಸ ಹೊಸ ಪರಿಚಯಗಳನ್ನು ಮಾಡಿಕೊಳ್ಳುತ್ತಾ, ಕೂಡುತ್ತಾ, ಅಗಲುತ್ತಾ ಸಾಗುವ ದಾರಿ ವಿಭಿನ್ನ ಅನುಭವ, ಆಯಾಮಗಳಿಗೆ ಸಾಕ್ಷಿಯಾಗಿದೆ. ಪೂರ್ವ ಬೆಂಗಾಲದ ಅಖೌರಾದಲ್ಲಿ ಎದುರಾದ 'ದಾಸ್' ಎಂಬುವವರೆ, ಮೂರ್ನಾಲ್ಕು ದಿನಗಳಿಂದಲೂ ಅನ್ನವಿಲ್ಲದೆ ಇದ್ದ ಲೇಖಕರನ್ನು ಒಂದು ಮನೆಗೆ ಕರೆದುಕೊಂಡು ಹೋಗುತ್ತಾನೆ. 'ಗೊಂತಿ' ಆ ಮನೆಯ ಯುವತಿಯ ಹೆಸರು. ಆಕೆ ತಂದುಕೊಟ್ಟ ಮೀನಿನ ವಾಸನೆಯುಳ್ಳ 'ಟೀ', ಮುಗ್ಗಿ ಹೋಗಿರುವ 'ಬನ್' ಇವುಗಳನ್ನು ಅನಿವಾರ್ಯವಾಗಿ ಸುರಿದುಕೊಂಡು ತಿಂದಂತಹ ಲೇಖಕರಿಗೆ ದಾಸು ಕೇಳುವ ಪ್ರಶ್ನೆ 'ನೀವು ಇಲ್ಲಿ ಕೊಡುತ್ತೀರಾ' ಈ ವಾಕ್ಯದ ಅರ್ಥ ತಿಳಿಯದೆ ಕೂತೇ ಇದ್ದೀರಲ್ಲ ಎನ್ನುವ ಲೇಖಕರು ಎದುರಿಗೆ ಕುಳಿತ ಗೊಂತಿಯ ಕಡೆ ನೋಡಿದಾಗ ಆಕೆ ಆತುರಗಣ್ಣುಗಳಿಂದ ಇವರನ್ನು ನೋಡುವ ರೀತಿ ಇವರಿಗೆ ಅರ್ಥವಾಗಿ ತಕ್ಷಣ ಎದ್ದು ಐದು ರೂಪಾಯಿ ನೋಟನ್ನು ನೀಡಿ ಹೊರಬರುವುದು. ಆಗ ಗೊಂತಿ ಊಟವನ್ನೂ ಮಾಡದೆ, ವಿಶ್ರಾಂತಿಯನ್ನೂ ಪಡೆಯದೇ ಈ ಹಣ ನೀಡುತ್ತಿರುವುದಾದರೂ ಯಾಕೆ ಎಂದು ಕೇಳುತ್ತಾಳೆ. ತಲೆಮಾರುಗಳು ತಿನ್ನುವಷ್ಟು ಆಸ್ತಿಯನ್ನು ಕೂಡಿಸಿಕೊಳ್ಳುತ್ತಿರುವವರು ಒಂದು ಕಡೆಯಾದರೆ ಅರ್ಹವಿಲ್ಲದೆ ಐದು ರೂಪಾಯಿಯನ್ನೂ ತೆಗೆದುಕೊಳ್ಳಲು ಮನಸೊಪ್ಪದ 'ಗೊಂತಿ' ಮತ್ತೊಂದು ಕಡೆ. ಬಡತನ ಆಕೆಯನ್ನು ವೇಶ್ಯೆಯನ್ನಾಗಿಸಿದೆ. ಆದರೆ ಅಕೆಯ ಮಾನವೀಯತೆಯನ್ನು ಕೊಲ್ಲಲು ಅದರಿಂದ ಆಗಲಿಲ್ಲ.

ಮತ್ತೆ ಕೆಲವು ದಿನಗಳ ನಂತರ ಅಗರ್ತಲಾದಲ್ಲಿ ಹಠಾತ್ತನೆ ಎದುರಾಗುವ ಅದೇ 'ದಾಸ್', ತಾನು ಮಿಲಿಟರಿ ಯೂನಿಟ್‌ನಲ್ಲಿ ಕ್ಯಾಂಟಿನ್ ಇಡಲು ಅನುಮತಿ ಪಡೆದು, ನಂತರದ ಕೆಲವು ದಿನಗಳಲ್ಲಿಯೇ ಸಿಪಾಯಿಗಳ ಬಿಡದಿಗಳಲ್ಲಿ 'ಹೆಣ್ಣುಹುಲಿಗಳು' ಓಡಾಡಲು ಅನು ಮಾಡಿಕೊಡುತ್ತಾನೆ. ಹಸಿವಿನಿಂದ ಕಂಗೆಟ್ಟ ಜನ ಒಂದು ಚಪಾತಿ ನೀಡಿದರೆ ಇಡೀ ರಾತ್ರಿ

ಮಲಗಲು ತಯಾರಿರುತ್ತಾರೆ ಎನ್ನುವ ಮಾತು ಮನಸ್ಸನ್ನು ಹಿಂಡುತ್ತದೆ. ಈ ಕೆಲಸ ಮಾಡುತ್ತಿರುವ ದಾಸ್‌ನ ಮೇಲೆ ಒಂದು ಸಿಟ್ಟು ಬಂದರೂ ಮತ್ತೊಂದು ಸಲ ಮೌನವಾಗುತ್ತೇವೆ. ಹೌದು ಹಸಿವು ಎಂತಹವರನ್ನು ಯಾವ ಕೆಲಸ ಬೇಕಾದರೂ ಮಾಡಿಸುತ್ತದೆ. ಇದೇ ಯೂನಿಟ್‌ನ ಪಕ್ಕದ ಹಳ್ಳಿಯ ಸಲ್ಮಾ ಎಂಬ ಹೆಣ್ಣು ಕಾಣೆಯಾದಾಗ, ಆಕೆಯನ್ನು ಹುಲಿ ಹಿಡಿದಿದೆ ಎಂದು ಎಲ್ಲರೂ ಭಾವಿಸಿದರೂ, ಒಂದಷ್ಟು ದಿನಗಳ ನಂತರ ಆಕೆ ದೂರದ ಸೂಳೆಗೇರಿಯ ಇಕ್ಕಟ್ಟಾದ ಕೋಣೆಗಳಲ್ಲಿ ಕಾಣಿಸಿದಾಗ ಲೇಖಕರ ಮನಸ್ಸು ಛಿದ್ರಗೊಳ್ಳುತ್ತದೆ. ಜೀವನವನ್ನು ಹಿಡಿದುಕೊಳ್ಳಲು ಹೋರಾಡುವ ಮನುಷ್ಯರು ಒಂದೆಡೆಯಾದರೆ ತಮ್ಮ ವೈಭೋಗಕ್ಕೇ ಇವರು ಇರುವರೆಂದು ನಡೆಕೊಳ್ಳುವವರು ಮತ್ತೊಂದೆಡೆ. ಯುದ್ಧ ತಂದಿರುವ ಇಂತಹ ಅಮಾನವೀಯ ಕೊಡುಗೆಯನ್ನು ಯಾರು ತಾನೆ ಸ್ವೀಕರಿಸಿಯಾರು? ಹಾಗೆಂದು ಇಂತಹ ಅಸಹಾಯಕರು ಎಷ್ಟು ಜನ ಕೂಡಿದರೆ ಅದನ್ನು ತಡೆಯಬಲ್ಲರು? ಪರಿಸ್ಥಿತಿ ಹೀಗಿದ್ದರೂ ಮಿಲಿಟರಿಯವರ ಬದುಕು ಹೇಗಿತ್ತೆಂದರೆ "ನಮಗೆ ಹೊಟ್ಟೆಗೂ ಬಟ್ಟೆಗೂ ಕೊರತೆಯಿಲ್ಲ. ವಿಲಾಸ ವಸ್ತುಗಳಿಗೆ, ಸಿಗರೇಟ್‌ಗಳಿಗೆ ಕುಡಿತದ ಪದಾರ್ಥಗಳಿಗೆ ಬರವಿಲ್ಲ. ಹಾಗೆ ನೋಡಿದರೆ ಅವು ಯಾವಾಗಲೂ ರಾಶಿಗಟ್ಟಲೆ, ಧರ್ಮರಾಜ ರಾಜಸೂಯ ಯಾಗವನ್ನು ಹಮ್ಮಿಕೊಂಡಾಗ ಆತನ ನಾಲ್ಕೂ ಜನ ತಮ್ಮಂದಿರೂ ಅಸೇತು ಶೀತಾಚಲ ಪರ್ಯಂತವಿದ್ದ ದೇಶಗಳ ರಾಜರೆಲ್ಲರನ್ನೂ ಸದೆಬಡಿದು ಧನಕನಕ ವಸ್ತು ವಾಹನಗಳನ್ನು ಹೊತ್ತು ತಂದು ಅಣ್ಣನ ಮುಂದೆ ಒಟ್ಟಿದರು. ಈ ಮಾನವ ಮಾರಣ ಯಾಗದಲ್ಲಿಯೂ ಸಹ ಅದೇ ಕೆಲಸ ನಡೆಯಿತು. ರಾಯಲ್ ಇಂಡಿಯನ್ ಆರ್ಮಿ ಸಪ್ಲೈ ಕೋರ್ಸ್‌ನವರು ತಮ್ಮ ಕಬಂಧ ಹಸ್ತಗಳಿಂದ ದೇಶವನ್ನೆಲ್ಲಾ ಜಾಲಾಡಿ ಎಲ್ಲ ತರದ ವಸ್ತುಗಳನ್ನೂ, ರಾಶಿಗಟ್ಟಲೆ ಬರವಿಲ್ಲದಂತೆ ತಂದೊಟ್ಟುತ್ತಿದ್ದಾರೆ. ಉಪ್ಪಿನೊಂದಿಗೆ ಒಂಭತ್ತು ದಿನಿಸುಗಳಲ್ಲದೆ, ತೊಂಬತ್ತೊಂಬತ್ತು ದಿನಸಿಗಳು ತಲೆ ಚಿಟ್ಟೆನ್ನುವಂತಿರುತ್ತಿದ್ದವು" ಇದು ವಾಸ್ತವದ ಚಿತ್ರಣ ಅಂದಿನ ಸಂದರ್ಭದಲ್ಲಿ ಸಹಜವೆಂಬಂತೆ ನಡೆಯುತ್ತಿದ್ದ ಈ ಕ್ರಿಯೆಯಲ್ಲಿ ದೇಶವೆಂದರೆ ಕೇವಲ ಮಣ್ಣೆಂದು ಭಾವಿಸಿದಂತೆ ತೋರುತ್ತದೆ. ಅಲ್ಲಿ ಮನುಷ್ಯರಿಗೆ ಯಾವುದೇ ಬೆಲೆಯಿದ್ದಂತೆ ಕಾಣದು. ಇನ್ನು ಮಾನವೀಯತೆ ಎಲ್ಲಿ ಕಾಣಬೇಕು.

ಇದಲ್ಲದೆ ಸೈನಿಕ ತುಕಡಿಗಳವರು ಅಕ್ಕಪಕ್ಕದ ಹಳ್ಳಿಗಳ ಹೆಂಗಸರ ಮಾನಭಂಗ ಮಾಡುವ ಪ್ರಸಂಗಗಳು ಎಗ್ಗಿಲ್ಲದೆ ನಡೆಯುತ್ತಿದ್ದುದನ್ನು ಲೇಖಕರು ವಿವರಿಸುತ್ತಾರೆ. ರೆಜಿಮೆಂಟಿನ ಡ್ರೈವರ್ ಒಬ್ಬ ಅಬ್ದುಲ್ಲಾನ ಮಗಳಾದ ರಜಿಯಾಳನ್ನು ಮಾನಭಂಗ ಮಾಡಿ, ಅದಕ್ಕೆ ಅಡ್ಡಬಂದ ಅಬ್ದುಲ್ಲಾ ಮತ್ತು ಆತನ ಹೆಂಡತಿ ಮಕ್ಕಳನ್ನು ಕೊಲ್ಲುವ ಪರಿಯು ನಮ್ಮನ್ನು ಮೂಖರನ್ನಾಗಿಸುತ್ತದೆ. ಕಾಮ ಮತ್ತು ಅಧಿಕಾರದ ಶಕ್ತಿಯ ಮುಂದೆ ಬಡತನ, ಅಸಹಾಯಕತೆಗಳು ಮಂಡಿಯೂರುತ್ತವೆ. ಮಾನವೀಯತೆ ಎಡೆಯಿಲ್ಲದೆ ಮೌನವಾಗುತ್ತದೆ. ಅಖೌರಾ ರೈಲ್ವೇ ಸ್ಟೇಷನ್ನಿನ ಬಳಿ ಲೇಖಕರು ಕಂಡ ಮೇಲೆ ಅಂಗಾತ ಬೆತ್ತಲೆಯಲ್ಲಿ ಮಲಗಿದ್ದ ಇಪ್ಪತ್ತೈದು ಮೂವ್ವತ್ತು ಜನ, ಅವರ ಶರೀರದಲ್ಲಿ ಹನಿ ರಕ್ತವಿಲ್ಲದೆ, ಹಿಡಿಯಷ್ಟು ಮಾಂಸವಿಲ್ಲದೆ ಇದ್ದಾರೆ. ಅದನ್ನು ನೋಡಿ ಹೇಸಿಕೊಳ್ಳುವ ಅಧಿಕಾರಿ, ಅವರನ್ನು ತೊಲಗಿ ಇಲ್ಲಿಂದ ಎಂದಾಗ ಚಲನೆಯೇ ಇಲ್ಲದ ಆ ಶರೀರಗಳು, ಒಬ್ಬಳು ಸತ್ತ ಹೆಣ್ಣಿನ ಬಾಯಿಂದ ನೊಣಗಳು ಓಡಾಡುತ್ತಿದ್ದು, ಆಕೆಯ ಬಡಕಲು ಮಗುವೊಂದು ಆ ಸತ್ತದೇಹದ ಮೊಲೆಯನ್ನು ಚೀಪುತ್ತಿರುವ ಭಯಾನಕ ದೃಶ್ಯ. ಮನುಷ್ಯನನ್ನು ಸಂಪೂರ್ಣ ಪಾತಾಳಕ್ಕಿಳಿಸಲು ಇನ್ನೇನು ಬೇಕು.

ಇದರ ಜೊತೆಗೆ ಮಿಲಿಟರಿ ಕ್ಯಾಂಪ್‌ಗಳಿಗೆ ಜಾಗವನ್ನು ಶುಚಿಗೊಳಿಸುವಾಗ ಬರುತ್ತಿದ್ದ ಕೂಲಿಯಾಳುಗಳು ಪಡುತ್ತಿದ್ದ ಪಾಡು, ಕಾಂಟ್ರಾಕ್ಟರ್‌ಗಳು ದನಗಳನ್ನು ತಿವಿದಂತೆ ಅವರನ್ನು ತಿವಿದು ಕೆಲಸ ಮಾಡಿಸುತ್ತಿದ್ದುದು, ಸಣ್ಣ ಸಣ್ಣ ಮಕ್ಕಳೂ ಸಹ ಆ ಕೆಲಸಗಳಿಗೆ ಬರುತ್ತಿದ್ದುದು ಲೇಖಕರಲ್ಲಿ ಕರುಳು ಕಿವುಚುತ್ತಿತ್ತು. ಆದರೆ ಮಾಡಲೇನು? ಸಿಪಾಯಿಗಳೀಗೆ ಟೀ ಕೊಡುವಾಗ ಸಾಧ್ಯವಾದರೆ ಅವರಿಗೂ ಕೊಟ್ಟು ಸಮಾಧಾನ ಪಟ್ಟುಕೊಳ್ಳುತ್ತಿದ್ದುದಷ್ಟೆ. ಆರ್.ಹೆಚ್.ಕ್ಯೂ ಕ್ಯಾಂಪಿನ ಬಳಿ ಕ್ಯಾಂಟೀನು ಇಡುವ ನಜೀಬುಲ್ಲಾ ಹಳ್ಳಿಯಿಂದ ತನ್ನ ಇಬ್ಬರು ಹೆಣ್ಣು ಮಕ್ಕಳನ್ನೂ ಕರೆದುಕೊಂಡು ಬರುವುದು. ಆ ಹೆಣ್ಣು ಮಕ್ಕಳ ಮೇಲೆ ಸಿಪಾಯಿಗಳೂ ಕಣ್ಣು ಹಾಕುವುದು, ನಂತರ ಇಬ್ಬರ ಮಧ್ಯೆ ವಾಗ್ವಾದವಾಗಿ ನಜೀಬುಲ್ಲಾನ ಒಲೆಯಲ್ಲಿ ಬೆಕ್ಕು ಮಲಗುವುದು, ಹಸಿವನ್ನು ತಾಳಲಾರದೆ ಆತನ ಮಕ್ಕಳು ಸಿಪಾಯಿಗಳಿಗೆ ಅಡಿಯಾಳಾಗುವುದು ಇವೆಲ್ಲವೂ ಯುದ್ಧದ ಸಮಯದಲ್ಲಿ ಮಾನವೀಯತೆ ಸತ್ತಿರುವುದನ್ನು ಪದೇ ಪದೇ ತೋರಿಸುತ್ತವೆ. ತನ್ನ ಆಸೆ ತೀರಿದ ತಕ್ಷಣ ನೂರು ರೂಪಾಯಿ ಕೊಡುವ ಸುಬೇದಾರನೇ ನಜೀಬುಲ್ಲಾನ ಕ್ಯಾಂಟೀನನ್ನೂ ಹಾಳುಗೆಡವಿರುತ್ತಾನೆ. ಆತನ ಆಸೆ ಪೂರೈಸಿದಾಗ ಕಾಣುವ ಮಾನವೀಯತೆ ಅದಕ್ಕೆ ವಿರೋಧ ವ್ಯಕ್ತವಾದಾಗ ಕಾಣುವುದಿಲ್ಲ. ಹಾಗೆಯೇ ಇಲ್ಲಿ ಕಂಡುಬರುವ ಒಂದು ಪ್ರಸಿದ್ಧ ಶ್ರೀಮಂತ ಕಂಪನಿ 'ರಂಗೂನ್ ಟ್ರೇಡಿಂಗ್ ಕೋ'. ಇದರ ಮಾಲೀಕರು ಆಗರ್ಭ ಶ್ರೀಮಂತರು. "ಅವರ ಕುಟುಂಬ ಹಣವೆಂಬ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿತ್ತು. ಅವರ ಮನೆಯ ಹೆಂಗಸರಿಗೆ ಕೆಲಸವೆಂಬುದೇ ಇಲ್ಲ. ಯಾವ ಅಭಿರುಚಿಗೆ ತಕ್ಕಂತೆ ಅವರು ಸಿಂಗರಿಸಿಕೊಂಡು ಸ್ನೇಹಿತರೊಂದಿಗೆ ಕಾರುಗಳಲ್ಲಿ ಓಡಾಡುತ್ತಿರುತ್ತಾರೆ. ಅವರಿಗೆ ಕುಟ್ಟುವುದಾಗಲಿ, ಬೀಸುವುದಾಗಲಿ, ಅಡುಗೆ ಮಾಡುವುದಾಗಲಿ ಗೊತ್ತಿಲ್ಲ. ಗೊತ್ತಿರುವುದೊಂದೇ ಅನ್ನ ಬಡಿಸಿದ ಬಾಳೆಯಂತಹ ಜೀವನವೆಂದರೆ ಅದೇ ಏನೋ ಅನಿಸಿತು." ಇಷ್ಟು ಶ್ರೀಮಂತರೆನಿಸಿದ ಈ ಕುಟುಂಬದ ಮತ್ತೊಂದು ಕುಡಿಯಾದ ಪದ್ಮ ಸಂಸಾರದ ಹೆಣಭಾರವನ್ನು ಹೊರಲಾರದೆ ಹೆಣಗುತ್ತಿರುವ ಹೆಣ್ಣು. ಇದು ಇನ್ನೊಂದು ತರಹದ ಯುದ್ಧ. ಅದು ಕೌಟುಂಬಿಕ ಯುದ್ಧ. ಈ ಕಂಪನಿಯ ಮಾಲೀಕ ಮತ್ತು ಪದ್ಮಳ ತಂದೆ ಅಣ್ಣ ತಮ್ಮಂದಿರು, ಇಬ್ಬರ ನಡುವೆ ಏನು ಭಿನ್ನಾಭಿಪ್ರಾಯವೋ ತಿಳಿಯದು. ಇಲ್ಲಿ ಯಾರ ಬಗ್ಗೆ ಯಾರಿಗೂ ಪ್ರೇಮ, ಅನುಕಂಪ, ಮಾನವೀಯತೆ ಏನೂ ಕಾಣದು, ಅವರ ಪಾಡಿಗವರು ಬೇರೆ ಬೇರೆ ಊರುಗಳಲ್ಲಿ ವಾಸಿಸುವುದು ಕಾಣುತ್ತದೆ.

ಇದೇ ಹಾದಿಯಲ್ಲಿ ಆಸ್ಪತ್ರೆ ಸೇರುವ ಲೇಖಕರು ಅಲ್ಲಿನ ದೃಶ್ಯಗಳನ್ನು ಬಿಚ್ಚಿಡುವುದು ಕಾಣುತ್ತದೆ. ತನ್ನ ಪಕ್ಕದ ಮಂಚಕ್ಕೆ ಬರುವ 'ಸಾಂವೆರಿಯಾ' ಎಂಬಾತನ ಹೊಟ್ಟೆಯಲ್ಲಿದ್ದ ಗುಂಡುಗಳನ್ನು ತೆಗೆದು ಆಪರೇಷನ್ ಮಾಡಿದರೂ, ಸರಿಯಾಗಿ ಹೊಲಿಗೆ ಹಾಕದೆ, ಕೆಲವು ತಿಂಗಳುಗಳ ನಂತರ ಆತ ಸಾಯುವುದು. ಅಗ ಆತನ ತಾಯಿ ಸಾವಿರಾರು ಮೈಲುಗಳ ಆಚೆ ತನ್ನ ಮಗನ ಭರವಸೆಯಲ್ಲಿ ಬದುಕುತ್ತಿರುವಳು, ಈ ಸುದ್ದಿ ತಿಳಿದರೆ ಏನಾಗಬಹುದು. ಒಂದು ವೇಳೆ ಹೆಂಡತಿಯಿದ್ದರೆ ಆಕೆಯ ಮುತ್ತೈದೆತನ, ಮಕ್ಕಳಿದ್ದರೆ ಅವರ ಭವಿಷ್ಯ ಹೇಗೆ? ಯುದ್ಧವೆಂಬುದು ಎಲ್ಲ ಮಾನವೀಯ ಸಂಬಂಧಗಳನ್ನು ಮರೆಸುತ್ತದೆ ಎನ್ನುವ ಲೇಖಕರ ಮನದಾಳದ ನೋವು ಮಾನವೀಯ ಮೌಲ್ಯಗಳು, ಸಂಬಂಧಗಳ ಬಗೆಗೆ ಮನಸ್ಸನ್ನು ಸೆಳೆಯುತ್ತದೆ. ಸಾಂವರಿಯಾ ಸತ್ತಾಗ ಆಸ್ಪತ್ರೆಯ ನರ್ಸ್ ಅಳುತ್ತಾಳೆ. ಅವಳಿಗೂ ಆತನಿಗೂ ಯಾವುದೇ ಸಂಬಂಧವಿಲ್ಲ. ಆದರೆ ಮಾನವೀಯತೆಯ ಕರುಳು ಮಿಡಿಯುತ್ತದೆ. ಇನ್ನು ಇದೇ ಆಸ್ಪತ್ರೆಯಲ್ಲಿ ನೈಟ್ ಡ್ಯೂಟಿಗೆ ಬರುವ ನರ್ಸ್ ಶೀಲಾ. ಇವಳಿಗೆ ಬಾಯ್ ಫ್ರೆಂಡ್ಸ್ ಅಧಿಕ. ಎಲ್ಲರ ಜೊತೆಯಲ್ಲಿಯೂ ಬಹಳ ಸಲಿಗೆಯಿಂದ ನಡೆಯುವ ಇವಳ ಜೀವನಶೈಲಿ ಒಂದು ತರದ್ದು. ತನ್ನ ಸಂಸಾರವನ್ನು ತೂಗಿಸಲು ಆಕೆ ಈ ರೀತಿಯ ವ್ಯವಹಾರಗಳನ್ನು ಮಾಡಬೇಕಾಗುತ್ತದೆ ಎನ್ನುತ್ತಾ, ತನ್ನ ಬದುಕನ್ನು ಹೀಗೆ ವಿವರಿಸುತ್ತಾಳೆ. "ಆದರೆ ನಾನು ಹೇಳುತ್ತೇನೆ ಕೇಳಿ. ನನಗೆ ಸಂಕೋಚ ಕಡಿಮೆ. ನಾನು ಹಾಯಾಗಿರಬೇಕು. ಆದರೆ ಅಲ್ಲಿಗೇ ಸಾಲದು. ಜಬಲ್‌ಪೂರ್‌ನಲ್ಲಿ ನನಗೆ ಮುಪ್ಪಾದ ತಂದೆತಾಯಿಯರಿದ್ದಾರೆ. ತಾಯಿ ಪಾರ್ಶ್ವವಾಯು ರೋಗಿ. ನನಗೊಬ್ಬ ಅಕ್ಕ ಇದ್ದಾಳೆ. ಆಕೆ ಹುಚ್ಚಿ. ತಮ್ಮ ಅಲ್ಲಿಯೇ ಆರ್ಡಿನೆನ್ಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ನಾವು ತುಂಬಾ ಬಡವರು. ಪ್ರತೀ ತಿಂಗಳೂ ಮನೆಗೆ ಮೂರು ನೂರು ರೂಪಾಯಿ ಕಳುಹಿಸಬೇಕು ತಪ್ಪದೆ.

ಹಾಗಾಗಿ ನನಗೆ ತುಂಬಾ ಗೆಳೆಯರು ಬೇಕಾಗುತ್ತಾರೆ." ಈಕೆಯ ಅನಿವಾರ್ಯತೆ, ಕೌಟುಂಬಿಕ, ಸಾಮಾಜಿಕ ಪರಿಸ್ಥಿತಿಗಳು ಆಕೆಯನ್ನು ಇಂತಹ ವೃತ್ತಿಗೆ ಪ್ರಚೋದಿಸಿವೆಯೇ ಹೊರತು ಅದು ಆಕೆಗೆ ಮೋಜಲ್ಲ.

ಇನ್ನು ಇದೇ ಆಸ್ಪತ್ರೆಯಲ್ಲಿ ಇರುವ ಕನ್ನಡಿಗ ಮೂರ್ತಿ ಸ್ಫುರದ್ರೂಪಿ. ಮೀನಾಳು ಕೂಡ. ಇಬ್ಬರದೂ ಒಂದು ಬಗೆಯ ಸಂಬಂಧ. ಹೌದು ಯುದ್ಧ ಎಷ್ಟು ನಿರ್ಬಂಧಿಸಿದರೇನು? ಯಾವ ಕ್ಷಣದಲ್ಲಾದರೂ ಪ್ರೀತಿ ಅರಳೇ ಬೇಕಲ್ಲ. ಇವನ ಹಾಗೆಯೇ ಮರಾಠಿ ಯುವಕ ಯಾದವ್. ಹಿಂದಿ ಹಾಡುಗಳನ್ನು ಹಾಡುವುದರಲ್ಲಿ ನಿಸ್ಸೀಮ. ಈ ಹಾಡುಗಾರಿಕೆಯಿಂದಲೆ ಹಿಂದೆ ಬಿದ್ದಳು ಒಬ್ಬ ಹುಡುಗಿ. ಅವಳಿಂದ ಮುಂಬೈಗೆ ಓಡಿಹೋದರೂ ಆಕೆಯ ತಂದೆ ಅಟ್ಟಿದ ಪೋಲಿಸರಿಂದ ತಪ್ಪಿಸಿಕೊಂಡು ಕೊನೆಗೆ ಮಿಲಿಟರಿ ಸೇರಿದ. ಮನುಷ್ಯರನ್ನು ಹಿಂಡಿ ಹಿಪ್ಪೆ ಮಾಡಿ ಹೊಡೆದಾಡಿಕೊಳ್ಳುತ್ತಿರುವ ದೇಶಗಳು ಒಂದೆಡೆಯಾದರೆ, ವ್ಯಕ್ತಿಗಳ ಮಧ್ಯೆ ಅರಳುವ ಬೆಳದಿಂಗಳಿನಂತಹ ಪ್ರೀತಿಯು ಮತ್ತೊಂದು ಕಡೆ. ಏಕೆಂದರೆ ನಾವು ಮನುಷ್ಯರಲ್ಲವೆ? ದ್ವೇಷವಿಲ್ಲದೆ ಬದುಕಬಲ್ಲೆವು, ಆದರೆ ಪ್ರೀತಿಯಿಲ್ಲದೆ ಸಾಧ್ಯವಿಲ್ಲ.

ಕರೀಂ ಎಂದು ಹೆಸರು ಬದಲಿಸಿಕೊಂಡಿದ್ದ ಕಮಲ್ ವಿವರಿಸುವ ಅಗರ್ತಲಾದ ಚಿತ್ರಣ "ಅಗರ್ತಲಾದಲ್ಲಿ ಹಸಿವಿನ ಪಿಶಾಚಿ ಹೇಗೆ ತಾಂಡವವಾಡುತ್ತಿದೆಯೋ ನಿಮಗೆ ಗೊತ್ತಿದೆ. ಎತ್ತ ನೋಡಿದರೂ ಹೆಣಗಳು, ನಡೆದಾಡುವ ಹೆಣಗಳು. ರಾತ್ರಿ ಹೊತ್ತಿನಲ್ಲಿ ಸಿಪಾಯಿಗಳು ಸುತ್ತಮುತ್ತಲ ಹಳ್ಳಿಗಳ ಮೇಲೆ ಮುಗಿಬೀಳುತ್ತಿದ್ದರು. ಹಳ್ಳಿಯ ಜನರು ಮೊದಲೇ ಅಮಾಯಕರು. ಅದರ ಜೊತೆಗೆ ಬಡತನದಿಂದ ತತ್ತರಿಸುತ್ತಿದ್ದರು. ಕತ್ತಲೆಯಲ್ಲಿ ನಿಶ್ಯಬ್ದವಾಗಿ ನಿದ್ರಿಸುತ್ತಿರುವ ಹಳ್ಳಿಗಳಲ್ಲಿ ಇದ್ದಕ್ಕಿದ್ದಂತೆ ಕಿರುಚಾಟ, ಕೂಗಾಟ, ಹೊಡೆದುಕೊಳ್ಳುವುದು, ಓಡುವುದು, ಆಹಾಕಾರಗಳು, ಬೊಬ್ಬೆ ಹಾಕುವುದು, ಹೊತ್ತುರಿಯುವ ಮನೆಗಳು... ಎಷ್ಟೋ ರಾತ್ರಿಗಳಲ್ಲಿ ಇವನ್ನೆಲ್ಲಾ ಕಣ್ಣಾರೆ ಕಂಡಿದ್ದೇನೆ. ನನ್ನ ಎದೆ ಹೊತ್ತುರಿಯುತ್ತಿತ್ತು." ಸೈನಿಕರ ನಡತೆಯು ಅಮಾಯಕರನ್ನು ಬಲಿ ತೆಗೆದುಕೊಳ್ಳುತ್ತಿರುವಾಗ ಯಾವ ದೇಶವನ್ನು ಕಟ್ಟಿಕೊಂಡು ಆಳಬೇಕು. ಮನುಷ್ಯರನ್ನು ಬಲಹಾಕಿ ಕಟ್ಟುವ ಯಾವ ದೇಶಗಳು ಉಳಿಯಲಿಕ್ಕೆ ಸಾಧ್ಯ. ದೇಶವನ್ನು ಕಾಯಬೇಕಾದವರೇ ಕಾಡಿ ತಿನ್ನುತ್ತಿರುವ ಈ ಪರಿಯನ್ನು ಏನೆನ್ನಬೇಕು. ಮಾನವೀಯತೆಯು ಮಸಣದ ಗುಂಡಿಯಲ್ಲಿ ಹೊತ್ತುಹೋಗಿರುವುದನ್ನು ಇಲ್ಲಿ ಗಮನಿಸಬೇಕು. ಆದರೆ ಕಮಲ್ ಇಲ್ಲಿಗೇ ನಿಲ್ಲದೆ ತನ್ನ ಕೈಯಲ್ಲಿದ್ದ ಮಿಲಿಟರಿಯ ಧವಸ ಧಾನ್ಯಗಳನ್ನು ಬಡಜನರಿಗೆ ಹಂಚುತ್ತಿದ್ದುದು, ಇದರಲ್ಲಿ ಪಾಲ್ಗೊಂಡಿದ್ದ ಅಮರ್‌ಸಿಂಗ್ ಅಹುಜಾನನ್ನು ಪೋಲೀಸರು ಹಿಡಿದಾಗ, ಕಮಲ್ ಆ ಕೆಲಸವನ್ನು ಬಿಡುವುದೂ ಕಾಣುತ್ತದೆ. ಮನಸ್ಸಿನಲ್ಲಿ ಮಾನವೀಯ ಪ್ರೇಮವನ್ನು ತುಂಬಿಕೊಂಡ ಕಮಲ್ ಮಾಡುವ ಕೆಲಸ ನಿಜವಾದ ದೇಶಪ್ರೇಮವೆಂದು ಕಾಣುತ್ತದೆ. ಮನುಷ್ಯರನ್ನು ಪ್ರೀತಿಸುವ, ಅವರಿಗೆ ತಮ್ಮ ಕೈಲಾದ ಸಹಾಯವನ್ನು ಮಾಡುವ, ಶಾಂತಿ, ನೆಮ್ಮದಿಯಿಂದ ಬದುಕಬೇಕೆನ್ನುವ ಇಂತಹ ಮನಸ್ಸುಗಳು ಎಂದಿಗೂ ಅಜರಾಮರ.

**ಉಪಸಂಹಾರ**

ಯುದ್ಧದಲ್ಲಿ ಪಾಲ್ಗೊಂಡು ತಮ್ಮ ಬಂಧುಬಳಗವನ್ನು ಅಗಲಿ ಬಂದಿದ್ದ ಸೈನಿಕರು ಕೊನೆಗೆ ಯುದ್ಧದಲ್ಲಿ ನಿರಾಸಕ್ತಿ ಹೊಂದಿ ತಮ್ಮವರಿಗಾಗಿ ಪರಿತಪಿಸುವ ಕ್ಷಣಗಳು ಇಲ್ಲಿ ಕಾಣುತ್ತವೆ. ಹೆಂಡತಿ ಮಕ್ಕಳಿಂದ, ತಂದೆ ತಾಯಿಗಳಿಂದ ಬರುವಂತಹ ಕಾಗದಗಳು ಕಣ್ಣಲ್ಲಿ ನೀರು ಸುರಿಸುವಂತೆ ಮಾಡುತ್ತವೆ. ಕೊನೆಗೆ ಮತ್ತೆ ನನ್ನ ಕುಟುಂಬವನ್ನು ಸೇರದೆಯೇ ಹೋಗುತ್ತೇನೇನೋ ಎನ್ನುವ ನೋವು ಆಳವಾಗಿ ಇವರನ್ನು ಕಾಡುವುದನ್ನು ಕಾಣುತ್ತೇವೆ. ಆಫ್ರಿಕಾದ ಕರಿಯ ಸಿಪಾಯಿಗಳನ್ನು ನಡೆಸಿಕೊಳ್ಳುತ್ತಿದ್ದ ರೀತಿ, ಬಿಳಿಯ ಸಿಪಾಯಿಗಳು ನಡೆಸುವ ದಾಂಧಲೆ, ಅತ್ಯಚಾರಗಳನ್ನು ಕರಿಯರ ತಲೆ ಮೇಲೆ ಹೊರಿಸಿ ಶಿಕ್ಷಿಸುತ್ತಿದ್ದುದು, ಮೇಲಧಿಕಾರಿಗಳು ಮಾಡಿದ ತಪ್ಪನ್ನು ಕೆಳವರ್ಗದ ಅಧಿಕಾರಿಗಳ ಮೇಲೆ ಹಾಕುತ್ತಿದ್ದುದು ಸರ್ವೇ ಸಾಮಾನ್ಯದಂತೆ ಕಾಣುತ್ತದೆ. ಸೈನಿಕ ವರ್ಷಗಳು ತಾವು ಕಾಣದ ಒಂದು ಅಮಾನವೀಯ ಮುಖವನ್ನು ತೆರೆದಿಡುತ್ತದೆ ಈ ಪುಸ್ತಕ. ಅಧಿಕಾರ ಹಿಡಿದಿರುವ ಸರಕಾರಗಳು ಸಾಮಾನ್ಯರಿಂದ ಎಲ್ಲವನ್ನೂ ಕಸಿದುಕೊಂಡು ತನ್ನ ಫಲವನ್ನು ಸಾಧಿಸಲಿಕ್ಕಾಗಿ ಬಳಸಿಕೊಳ್ಳುವುದು. ಈ ನಡುವೆ ಯಾರ್‍ಯಾರಿಗೆ ಬೇಕಾದ್ದನ್ನು ಅವರು ಪಡೆಯಲೆತ್ನಿಸುವುದೂ, ಎಲ್ಲದಕ್ಕೂ ಅಮಾಯಕರು ಬಲಿಯಾಗುವುದು, ಯುದ್ಧದ ಪರಮ ನೀಚತನವನ್ನು ಸೂಚಿಸುತ್ತದೆ. ಇವುಗಳ ನಡುವೆಯೂ ಕಮಲ್ ಮತ್ತು ಪದ್ಮ,

ಉಮಾ ಮತ್ತು ಲಹರೀ, ಮೂರ್ತಿ ಮತ್ತು ಮೀನಾ ಎಲ್ಲ ಅಡೆತಡೆಗಳನ್ನು ಮೀರಿದ್ದು. ಯುದ್ಧವು ಮನುಷ್ಯರನ್ನು ಹಿಡಿದು ಹೊಸಕಿ ಹಾಕಿದರೂ, ಬೇಸಿಗೆಯಲ್ಲಿ ಒಣಗಿ ಹೋದ ಗರುಕೆಯು ಮಳೆಗಾಲದಲ್ಲಿ ನಿಲ್ಲುತ್ತದೆ ಎಂಬುದಕ್ಕೆ ಈ ಜೋಡಿಗಳೇ ಸಾಕ್ಷಿ. ಅಂದ ಹಾಗೆ ಯುದ್ಧ ಮಾನವೀಯತೆಯನ್ನು ತೋರಿದ್ದಕ್ಕಿಂತ ಕಸಿದುಕೊಂಡಿದ್ದೇ ಹೆಚ್ಚು. ಅದು ಎಂದಿಗೂ ಸರ್ವಾಧಿಕಾರಿ. ಯಾರ ಒಳಿತನ್ನೂ ಬಯಸದು.

**ಪರಾಮರ್ಶನ ಗ್ರಂಥಗಳು**

1. ವಿರಾಮ, ಅನು. ಕೆ. ಶಾರದಾ, ಪ್ರಸಾರಾಂಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ಮೊದಲ ಮುದ್ರಣ–
2. ಸಿನಾರೆ ಗಜಲ್‌ಗಳು, ಅನು. ಮಾರ್ಕಂಡಪುರಂ ಶ್ರೀನಿವಾಸ್, ಪ್ರಸಾರಾಂಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ಮೊದಲ ಮುದ್ರಣ–
3. ದಕ್ಷಿಣದೇಶಾ ಭಾಷಾ ಸಾಹಿತ್ಯಗಳು ಮತ್ತು ದೇಶಿ, ಅನು. ಆರ್. ಶೇಷಶಾಸ್ತ್ರಿ, ಪ್ರಸಾರಾಂಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ಮೊದಲ ಮುದ್ರಣ–
4. ಮುಂದಡಿ, ಅನು. ಸ. ರಘುನಾಥ, ಪ್ರಸಾರಾಂಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ಮೊದಲ ಮುದ್ರಣ–
5. ರಾಯವಾಚಕ, ಅನು. ಗುರುಮೂರ್ತಿ ಪೆಂಡಕೂರು, ಪ್ರಸಾರಾಂಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ಮೊದಲ ಮುದ್ರಣ–

**Citation:** ಡಾ. ಮುನಿರಾಜ ಎ 2026. "ಯುದ್ಧದ ಯಜ್ಞಕ್ಕೆ ಆಜ್ಯ ಮಾನವೀಯತೆ". International Journal of Academic Research, 13(2): 88-91.
**Copyright:** ©ಡಾ. ಮುನಿರಾಜ ಎ. This is an open-access article distributed under the terms of the Creative Commons Attribution License (https://creativecommons.org/licenses/by/4.0/), which permits unrestricted use, distribution, and reproduction in any medium, provided the original author and source are credited.